ಉ) ಇದರಿಂದ ಆಗತಕ್ಕ ಲಾಭವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಹೌದು.

ಆ) 4.5 ಮಿಲಿಯನ್ ಯೂರೋಗಳವರೆಗೆ ಅಂದರೆ ಸುಮಾರು 20 ಕೋಟಿ ರೂಪಾಯಿಗಳು.

ಇ) ವಾರ್ಷಿಕ ಶೇಕಡ 2.6

ಈ) ಸದರೀ ಸಾಲವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪಡೆದಿರುವುದರಿಂದ ಅದರ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಹೊಂದಿರುವ ಬಡಾವಣೆಯಲ್ಲಿ ಆಧಾರಾಂಶ ಮತ್ತು ಭೂ ವಿವರಣಾ ಮಾಹಿತಿ ವ್ಯವಸ್ಥೆಗಾಗಿ ಈ ಹಣ ಖರ್ಚು ಮಾಡಲಾಗುತ್ತದೆ.

ಉ) ಬೆಂಗಳೂರು, ದೇಶದಲ್ಲಿಯೇ ನಗರ ಪ್ರದೇಶದ ಯೋಜನೆಗಾಗಿ, ಆಧುನಿಕ ಸಾಧನಗಳನ್ನು ಬಳಸುತ್ತಿರುವ ಪ್ರಥಮ ನಗರವಾಗಿದೆ.

ಬೆಂಗಳೂರಿನ ಕೊಳಚೆ ಪ್ರದೇಶದ ನಿವಾಸಿಗಳಿಗೆ ನಿರ್ಮಲ ಜ್ಯೋತಿ ಯೋಜನೆ

1359 (86) ಶ್ರೀ ಕಟ್ಟಾಸುಬ್ರಮಣ್ಯನಾಯ್ಡು (ಶಿವಾಜಿನಗರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಕುಟುಂಬಗಳೆಷ್ಟು;

ಆ) ಸರ್ಕಾರವು ಈ ನಿವಾಸಿಗಳಿಗೆ ರಸ್ತೆ, ಚರಂಡಿ, ವಿದ್ಯುತ್, ಕುಡಿಯುವ ನೀರು ಇತ್ಯಾದಿ ಮೂಲಭೂತ ಸೌಲಭ್ಯ ಒದಗಿಸಲು ನಿರ್ಮಲ ಜ್ಯೋತಿ ಯೋಜನೆಯನ್ನು ಬೆಂಗಳೂರು ನಗರದಲ್ಲಿ ಜಾರಿಗೆ ತರಲಾಗಿದೆಯೇ;

ಇ) ಸರ್ಕಾರವು ಇದಕ್ಕಾಗಿ ಈ ಸಾಲಿನಲ್ಲಿ ಬೆಂಗಳೂರು ನಗರದಲ್ಲಿ ಖರ್ಚುಮಾಡಿದ ಹಾಗೂ ಖರ್ಚು ಮಾಡಲಿರುವ ಹಣವೆಷ್ಟು?

ಶ್ರೀ ಆರ್. ಸಗೀರ್ ಅಹಮದ್ (ವಸತಿ ಸಚಿವರು) :

ಅ) ಬೆಂಗಳೂರು ನಗರದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಿಂದ ಘೋಷಿತ 202 ಕೊಳಚೆ ಪ್ರದೇಶಗಳಿದ್ದು. ಇದರಲ್ಲಿ 4061 ಕುಟುಂಬಗಳು ಮತ್ತು 2,39,257 ನಿವಾಸಿಗಳು ವಾಸಿಸುತ್ತಿರುವುದಾಗಿ 1993 - 94 ನೇ ಸಾಲಿನ ಸಮೀಕ್ಷೆಯಿಂದ ತಿಳಿದುಬಂದಿದೆ.

ಆ) ಬೆಂಗಳೂರು ನಗರದಲ್ಲಿ ನಿರ್ಮಲಜ್ಯೋತಿ ಯೋಜನೆಯನ್ನು ಕೈಗೊಂಡಿರುವುದಿಲ್ಲ. ಆದರೆ ಘೋಷಿತ ಕೊಳಚೆ ಪ್ರದೇಶದಲ್ಲಿ ಮಂಡಳಿಯ ನಿಗಧಿತ ಕಾರ್ಯಕ್ರಮಗಳಡಿ ಲಭ್ಯವಿರುವ ಅನುದಾನದ ಮೇರೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

ಇ) ಮಂಡಳಿಯು 2002-2003 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಬೆಂಗಳೂರು ನಗರದ 43 ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳ ಕಾಮಗಾರಿಗಳನ್ನು ಕೈಗೊಳ್ಳಲು 131.00 ಲಕ್ಷ ರೂ.ಗಳನ್ನು ಒದಗಿಸಿದ್ದು. ಈ ಹಣದಲ್ಲಿ ಫೆಬ್ರವರಿ ಅಂತ್ಯಕ್ಕೆ 36 ಕೊಳಚೆ ಪ್ರದೇಶಗಳ ಕಾಮಗಾರಿಗಳಿಗೆ 84.92 ಲಕ್ಷ ರೂ.ಗಳ ವೆಚ್ಚ ಮಾಡಲಾಗಿದೆ.